(ಕರ್ನಾಟಕ ಸುಧಾರಣಾ ಮಂಡಲಿಗಳ ಅಧಿನಿಯಮ, 1976, 1976ರ ಕರ್ನಾಟಕ ಅಧಿನಿಯಮ 11 ರ ಉದ್ಧೃತ ಭಾಗ)

** ** ** **

15. ಯೋಜನೆಯನ್ನು ತಯಾರಿಸಿದ ನಂತರದ ಪ್ರಕ್ರಿಯೆ - (1) ಯಾವುದೇ ಅಭಿವೃದ್ಧಿ ಯೋಜನೆಯನ್ನು ಅಥವಾ ಮೇಲ್ಪಟ್ಟ ಯೋಜನೆಯನ್ನು ತಯಾರಿಸುವಾಗ , ಯೋಜನೆಯನ್ನು ತಯಾರಿಸಲಾಗಿರುವ ಸಂಗತಿಯನ್ನು ನಿರೂಪಿಸಿದ ಮತ್ತು ಯೋಜನೆಯ ವಿವರಗಳನ್ನು ಅದರಲ್ಲಿ ಅಡಕವಾಗಿರುವ ಪ್ರದೇಶದ ನಕ್ಷೆಯನ್ನು ಮತ್ತು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿರುವ ಭೂಮಿಯನ್ನು ನಿರ್ದಿಷ್ಟಪಡಿಸುವ ಹಾಗೂ ಯಾವ ಭೂಮಿಯ ಬಗ್ಗೆ ಅಭಿವೃದ್ಧಿ ತೆರಿಗೆಯನ್ನು ವಸೂಲು ಮಾಡಲು ಉದ್ದೇಶಿಸಲಾಗಿದೆಯೋ ಆ ಭೂಮಿಯ ವಿವರ ಪತ್ರವನ್ನು ಯಾವ ಸ್ಥಳದಲ್ಲಿ ಎಲ್ಲ ಯುಕ್ತ ಕಾಲಗಳಲ್ಲೂ, ಕಾಣಬಹುದೋ ಆ ಸ್ಥಳವನ್ನು ಹೆಸರಿಸಿ ಒಂದು ಅಧಿಸೂಚನೆಯ ಕರಡನ್ನು ತಯಾರಿಸತಕ್ಕುದು, ಮತ್ತು

(ಕ) ಅಂಥ ಅಧಿಸೂಚನೆಯ ಪ್ರತಿಯನ್ನು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಕ್ಕೆ ಕಳುಹಿಸತಕ್ಕುದು ಮತ್ತು ಅದು, ಅದನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗೆ, ಯೋಜನೆಯ ಬಗ್ಗೆ ಸಲ್ಲಿಸುವುದು ಸೂಕ್ತವೆಂದು ಸ್ಥಳೀಯ ಪ್ರಾದಿಕಾರವು ಭಾವಿಸುವ ಯಾವುದೇ ಮನವಿಯನ್ನು, ಇದರಲ್ಲಿ ಇನ್ನು ಮಂದೆ ಉಪಬಂಧಿಸಿರುವಂತೆ, ಸರ್ಕಾರಕ್ಕೆ ರವಾನಿಸುವುದಕ್ಕಾಗಿ, ಮಂಡಲಿಗೆ ಕಳುಹಿಸತಕ್ಕುದು, ಮತ್ತು

(ಖ) ಸದರಿ ಅದಿಸೂಚನೆಯ ಪ್ರತಿಯನ್ನು ಸರ್ಕಾರೀ ರಾಜ್ಯಪತ್ರದಲ್ಲಿ ಪ್ರಕಟಿಸುವಂತೆ ಮತ್ತು ಮಂಡಲಿಯು ಕಛೇರಿಯ, ಡೆಪ್ಯುಟಿ ಕಮೀಷನರ ಕಛೇರಿಯ, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಕಛೇರಿಯು, ಎದ್ದು ಕಾಣುವ ಭಾಗದಲ್ಲಿ ಮತ್ತು ಮಂಡಲಿಯು ಅವಶ್ಯವೆಂದು ಬಾವಿಸಬಹುದಾದಂಥ ಸ್ಥಳಗಳಲ್ಲಿ ಅಂಟಿಸುವಂತೆ ಮಾಡತಕ್ಕುದು.

(2) (1) ಉಪ-ಪ್ರಕರಣದ (ಕ) ಖಂಡದ ಮೇರೆಗಿನ ಪತ್ರದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸ್ಥಳೀಯ ಪ್ರಾಧಿಕಾರದಿಂದ ಮನವಿಯು ಬಾರದಿದ್ದಲ್ಲಿ, ಸ್ಥಳೀಯ ಪ್ರಾಧಿಕಾರವು ಆ ಪ್ರಸ್ತಾವಕ್ಕೆ ಸಹಮತಿಯನ್ನು ಕೊಟ್ಟಿರುವುದಾಗಿ ಭಾವಿಸತಕ್ಕುದು.

(3) ಸರ್ಕಾರೀ ರಾಜ್ಯ ಪತ್ರದಲ್ಲಿ ಅಂಥ ಅಧಿಸೂಚನೆಯು ಪ್ರಕಟವಾದ ದಿನದಿಂದ ನಿಕಟ ತರುವಾಯದ ಮೂವತ್ತು ದಿನಗಳ ಅವಧಿಯಲ್ಲಿ, ಯೋಜನೆಯಲ್ಲಿ ಅಡಕವಾಗಿರುವ ಪ್ರದೇಶವು ಯಾವ ಸ್ಥಳೀಯ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳಲ್ಲಿ ಇದೆಯೋ ಆ ಸ್ಥಳೀಯ ಪ್ರಾಧಿಕಾರದ ಕರ ನಿರ್ಧಾರಣೆಯ ಪಟ್ಟಿಯಲ್ಲಿ ಅಥವಾ ಭೂ ಕಂದಾಯದ ರಿಜಸ್ಟರಿನಲ್ಲಿ ಹೆಸರು ಇರುವ ಪ್ರತಿಯೊಬ್ಬ ವ್ಯಕ್ತಿಗೆ ಆ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿರುವ ಯಾವುದೇ ಕಟ್ಟಡದ ಅಥವಾ ಭೂಮಿಯ ಬಗ್ಗೆ ಸ್ವತ್ತು ತೆರಿಗೆಯನ್ನು ಅಥವಾ ಭೂ ಕಂದಾಯವನ್ನು ಸಂದಾಯ ಮಾಡಲು ಅವನು ಪ್ರಥಮತಃ ಹೊಣೆಗಾರನಾಗಿರುವನೆಂದು ನೋಟೀಸನ್ನು ಜಾರಿ ಮಾಡತಕ್ಕುದು ಮತ್ತು ನೋಟಿಸಿನಲ್ಲಿ ನಿರ್ದಿಷ್ಟಪಡಿಸಲಾಗಿರುವ ಕಟ್ಟಡವನ್ನು ಅಥವಾ ಆ ಭೂಮಿಯನ್ನು ಏಕೆ ಸ್ವಾಧೀನಪಡಿಸಿಕೊಳ್ಳಬಾರದೆಂಬುದಕ್ಕೆ ಮತ್ತು ಪುರೋಭಿವೃದ್ಧಿ ತೆರಿಗೆಯನ್ನು ಏಕೆ ವಸೂಲ್ಮಾಡಬಾರದೆಂಬುದಕ್ಕೆ ಮೂವತ್ತು ದಿನಗಳೊಳಗೆ ಕಾರಣವನ್ನು ತೋರಿಸಬೇಕೆಂದು ಅಂಥ ವ್ಯಕ್ತಿಯನ್ನು ಅಗತ್ಯಪಡಿಸತಕ್ಕುದು.

** ** ** **